

## ಕಿಸಾನ್ ವಿಕಾಸ್ ಪತ್ರ

ನಾನಾಗ ಅಂಚೆ ಕಚೇರಿಯ ಸೇವಿಂಗ್ಸ್ ಬ್ಯಾಂಕ್ ಕೌಂಟರ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಒಂದು ದಿನ ಗ್ರಾಹಕರೊಬ್ಬರು ಬಂದು ತಾನು ಸ್ವಲ್ಪ ಹಣವನ್ನು ಠೇವಣಿ ಮಾಡುವುದಾಗಿಯೂ, ತನಗದು ಮೂರು ವರ್ಷಗಳಲ್ಲಿ ಮಗಳ ಮದುವೆಗೆ ಅಗತ್ಯವಿರುವುದಾಗಿಯೂ ತಿಳಿಸಿದರು. ಆಗ ಅವರಿಗೆ ಕಿಸಾನ್ ವಿಕಾಸ ಪತ್ರ ಖರೀದಿಸಿರಿ ಎಂದು ನಾನು ತಿಳಿಸಿದೆ. ತಕ್ಷಣ ಅವರು, 'ಸ್ವಾಮೀ, ನಾನು ರೈತ(ಕಿಸಾನ್) ಅಲ್ಲ, ವ್ಯಾಪಾರಿ. ಆದರೂ ಕಿಸಾನ್ ವಿಕಾಸ ಪತ್ರವನ್ನು ನಾನು ಪಡೆಯಬಹುದೇ?' ಎಂದು ಕೇಳಬೇಕೇ! ನಾನಾಗ, 'ಕಿಸಾನ್ ವಿಕಾಸ ಪತ್ರ ಎನ್ನುವುದು ಉಳಿತಾಯ ಯೋಜನೆಯ ಹೆಸರು. ಅದನ್ನು ಯಾರು ಬೇಕಾದರೂ ಖರೀದಿಸಬಹುದು ಎಂದು ತಿಳಿಸಿ ಹೇಳಿದೆ.

**ಯಜ್ಞನಾರಾಯಣ ಉಳ್ಳೂರ, ಕೋಟೇಶ್ವರ**

## ಫ್ಯಾನು ಹೋಗಿದೆ...

ನಮ್ಮ ಮನೆಯ ಫ್ಯಾನ್ ಹಾಳಾಗಿತ್ತು. ನಮ್ಮ ಮನೆಯವರು ಬ್ಯಾಂಕಿನಿಂದ ಮನೆಗೆ ಬಂದಾಗ, 'ರೀ ಫ್ಯಾನ್ ಹೋಗಿಬಿಟ್ಟಿದೆ' ಎಂದೆ. ಅವರು ಗಂಭೀರವಾಗಿ, 'ಮನೆಯಲ್ಲಿ ಇಷ್ಟೊಂದು ಜನ ಇದ್ದರೂ. ಅದನ್ನು ಹೋಗಲು ಯಾಕೆ ಬಿಟ್ಟಿರಿ, ಒಬ್ಬರಾದರೂ ತಡೆಯಬಾರದೇ' ಎಂದಾಗ ನನಗೆ ಒಂದು ಕ್ಷಣ ತಬ್ಬಿಬ್ಬು. ಆಮೇಲೆ ಅರ್ಥವಾದಾಗ ಎಲ್ಲರೂ ನಕ್ಕಿದ್ದೆ ನಕ್ಕಿದ್ದು. ಫ್ಯಾನ್ ಕೆಟ್ಟಿದೆ ಎಂದು ಹೇಳುವುದಕ್ಕೆ ನಾನು ಫ್ಯಾನು ಹೋಗಿದೆ ಎಂದಿದ್ದೆ!

**ನೀಲಮ್ಮ ಕುಮಾರಪ್ಪ, ಲಿಂಗಸುಗೂರು**



ಚಿತ್ರಗಳು: ಗಣೇಶ ಆಚಾರ್ಯ